ರೋದು ಅವನಿಗೆ ಗೊತ್ತು. ಕಿರಣನನ್ನು ಕೊಲೆ ಮಾಡ್ತೀನೀಂತ ಕೂಡ ಬೆದರಿಕೆ ಹಾಕಿದ್ದ'

'ಹೌದೇ, ಈ ವಿಷಯ ನೀವು ನನಗೆ ತಿಳಿಸ್ಲಿಲ್ಲ. ಅವನಿಂದ ಕಿರಣನಿಗೇನೂ ತೊಂದರೆಯಾಗಲಿಲ್ಲವಲ್ಲವೇ?'

'ಇಲ್ಲ'

'ಆದರೆ ಅವನು ಭುಜಂಗೇಶರಾಯರಿಗೆ ತೊಂದರೆ ಮಾಡಿದ'

ಮೇನಕಾ ಅರ್ಥವಾಗದೆ ಪ್ರಶ್ನಾರ್ಥಕವಾಗಿ ಅಧಿಕಾರಿ ಮತ್ತು ಕಿರಣನ ಮುಖ ನೋಡಿದಳು. ಕಿರಣನಿಗೂ ಗೊಂದಲವಿತ್ತು.

'ಅವರನ್ನು ಸುಮ್ಮನೆ ಹೈದರಾಬಾದ್‌ಗೆ ಹೋಗುವಂತೆ ಮಾಡಿದ. ಅಲ್ಲದೆ, ನಿನ್ನ ಚಿಕ್ಕಮ್ಮ, ಅಂದ್ರೆ ಕಾಶಮ್ಮನನ್ನು ಅನಗತ್ಯ ಮನೆಯಿಂದ ಹೊರಗೆ ಕರೆಸಿ ಅವನ ಮನೆಯಲ್ಲಿರಿಸಿದ'

'ಹಾಗಾದ್ರೆ ಕಾಶಮ್ಮನನ್ನು ಕಾರು ಕಳುಹಿಸಿ ಕರೆಸಿಕೊಂಡದ್ದು ಕಾಕುಟ್ಟನೇ?'

'ಹೌದು, ಕಾಕುಟ್ಟ ಭುಜಂಗೇಶರಾಯರನ್ನು ಬ್ಲ್ಯಾಕ್ ಮೇಲ್ ಮಾಡುವ ಉದ್ದೇಶದಿಂದ ಕಾಶಮ್ಮನನ್ನು ಕರೆಸಿಕೊಂಡಿದ್ದ. ಕಾಶಮ್ಮ ಅದೇ ಸಮಯಕ್ಕೆ ಭುಜಂಗೇಶರಾಯರಿಗೆ ಫೋನ್ ಮಾಡಿ ವಿಷಯ ತಿಳಿಸಿದ್ದಾರೆ. ಇದನ್ನೇ ಆಕೆಯ ಸಹಾಯಕಿ ನಳಿನಿ ಕಾಶಮ್ಮನೇ ಫೋನ್ ಮಾಡಿ ಕಾರು ತರಿಸಿಕೊಂಡಿದ್ದಾಳೆಂತ ತಿಳಿದಿದ್ದಾಳೆ'

'ಈಗ ಕಾಕುಟ್ಟ ಎಲ್ಲಿದ್ದಾನೆ?'

'ಅವನು ಈಗ ನಮ್ಮ ಬಲೆಗೆ ಬಿದ್ದಿದ್ದಾನೆ. ಅವನು ಭುಜಂಗೇಶರಾಯರನ್ನು ಭೇಟಿಯಾಗುವ ಉದ್ದೇಶದಿಂದ ಹಿತೇಶನನ್ನು ಕರೆದುಕೊಂಡು ಹೈದರಾಬಾದ್‌ಗೆ ಹೋಗಿದ್ದ. ಅಷ್ಟರಲ್ಲಿ ಭುಜಂಗೇಶರಾಯರು ಇಲ್ಲಿಗೆ ವಾಪಾಸಾಗಿದ್ದಾರೆ. ಅಷ್ಟರಲ್ಲಿ ಅವರಿಗೆ ತಕ್ಷಣವೇ ಹೈದರಾಬಾದ್ಗೆ ಬರುವಂತೆ ಮತ್ತೊಂದು ಮೊಬೈಲ್ ಕರೆ ಬಂತು'

'ಕಾಕುಟ್ಟನಿಂದ?'

'ಅಲ್ಲ, ಲಹರಿ ಹೈದರಾಬಾದ್‌ನಲ್ಲಿದ್ದಾಳೆಂತ ಆ ಕರೆ ಮಾಡಿದ ವ್ಯಕ್ತಿ ಹೇಳಿದ'

'ಅದಕ್ಕೆ ಡ್ಯಾಡಿ ತುರ್ತಾಗಿ ಮತ್ತೆ ಹೈದರಾಬಾದ್‌ಗೆ ಹೋಗಿರೋದು'

'ಹೌದು'

'ಹಾಗಾದರೆ ಆ ಕರೆ ಮಾಡಿರುವ ವ್ಯಕ್ತಿ ಯಾರು?' ಮೇನಕಾಳ ಕುತೂಹಲ ತಣಿಯಲಿಲ್ಲ.

'ಅನುಮಾನಾಸ್ಪದ ರೀತಿಯಲ್ಲಿ ಲಹರಿಯ ಬಟ್ಟೆಗಳು ಮರಳು ದಿಣ್ಣೆಯಲ್ಲಿ ಸಿಕ್ಕಿದ್ವು ಅಂದೆನಲ್ಲ. ಹಾಗೆ ಅನುಮಾನ ಬರೋ ಹಾಗೆ ಮಾಡಿದ ವ್ಯಕ್ತಿಯೇ ಆ ಫೋನ್ ಕರೆಯನ್ನು ಮಾಡಿದೋನು'

ಕಿರಣ, ಮೇನಕಾ ಇಬ್ಬರ ಮುಖದಲ್ಲಿಯೂ ಇನ್ನಷ್ಟು ಗೊಂದಲ ವೇರ್ಪಟ್ಟಿತು. ಅಧಿಕಾರಿ ಟೀ ತಂದಿಟ್ಟು ಹೋಗಿದ್ದ ಸಾರಂಗನನ್ನು ಮತ್ತೆ ಕರೆದ. ಸಾರಂಗ ಒಳಗೆ ಬಂದ.

'ಹಳದಿ ಫೈಲ್‌ನ ಈಚೆ ಕೊಡು'

ಪಿಸಿ ಹಳದಿ ಫೈಲ್ ತೆಗೆದು ಅಧಿಕಾರಿಯ ಕೈಗಿತ್ತ. ಅಧಿಕಾರಿ ಅದರಿಂದ ಒಂದು ಫೋಟೊ ತೆಗೆದು ಅವರಿಬ್ಬರ ಮುಂದೆ ಹಿಡಿದ. ಮೇನಕಾ ಆ ಫೋಟೊವನ್ನು ಗುರುತಿಸಿ ಮಿಂಚು ಹೊಡೆದವರಂತೆ ಬಾಯ್ದೆರೆದಳು.

'ಹೌದು ಮೇನಕಾ, ಈತನೇ ಲಹರಿಯನ್ನು ಆ ದಿನ ಪಾಂಬುವಿಗೆ ಹತ್ತು ಸಾವಿರ ರೂಪಾಯಿ ಕೊಟ್ಟು ದೋಣಿಯಲ್ಲಿ ಕರೆದೊಯ್ದು, ಅವಳ ಕಣ್ಮರೆಗೆ ಕಾರಣನಾದವನು. ನಿನ್ನ ಡ್ಯಾಡಿಯ ನಂಬುಗೆಯ ಸೇವಕ'

ಕಿರಣನಿಗೆ ಆತನನ್ನು ನೋಡಿದ ನೆನಪಾಯಿತು. ಫೋಟೋವನ್ನು ದಿಟ್ಟಿಸಿದ.

'ಭುಜಂಗೇಶರಾಯರ ಕಾರಿನ ಚಾಲಕ, ಶೇಖರ. ಈತನೇ ಲಹರಿಯ ಕಣ್ಮರೆಯ ರೂವಾರಿ. ಭುಜಂಗೇಶರಾಯರನ್ನು ಹೈದರಾಬಾದ್‌ಗೆ ವ್ಯವಹಾರಕ್ಕೆ ಬರುವಂತೆ ಮಾಡಿ ಅಲ್ಲಿ ಅವರಿಂದ ಹಣ ದೋಚ್ತಾ ಇದ್ದೋನು. ಈ ವಿಷಯ ಅವರಿಗೆ ಕೊನೆವರೆಗೂ ಗೊತ್ತಾಗ್ಲಿಲ್ಲ. ನಾವು ಅವನನ್ನು ಬಂಧಿಸಿದ ಮೇಲೆ ಅವರಿಗೆ ತಿಳಿದದ್ದು'

'ಲಹರಿ ಈಗ ಎಲ್ಲಿದ್ದಾಳೆ?'

'ಲಹರಿ ಸೇಫಾಗಿ 'ಮೇನಕಾ' ಬಂಗ್ಲೆಯಲ್ಲಿದ್ದಾಳೆ. ಮೇನಕಾ, ನಿಮಗೆ ಇನ್ನೊಮ್ಮೆ ಪಾರ್ಟಿ ಮಾಡೋ ಅವಕಾಶ'

ಇನ್ಸ್‌ಪೆಕ್ಟರ್ ರಾಜಧಾನಿ ಕಿರಣನನ್ನು ನೋಡಿ ನಕ್ಕ. ಮೇನಕಾಳ ಮುಖದಲ್ಲಿ ಹುಸಿ ಮುನಿಸೊಂದು ಮೂಡಿತು. ಅವಳು ಕಿರಣನ ಕೈಯನ್ನು ಮೆತ್ತಗೆ ಹಿಡಿದಳು.

(ಮುಗಿಯಿತು)

**ಡಾ.ಎಂ.ವೆಂಕಟಸ್ವಾಮಿ ಅವರ ಹೊಸ ಧಾರಾವಾಹಿ**




ಮಕ್ಕಳನ್ನು ನಿರ್ಭಿಡೆಯಿಂದ ಬದುಕುವಂತೆ ಬೆಳೆಸಿದ್ದು ಅಪ್ಪ ಅಮ್ಮನ ತಪ್ಪೇ? ಅವರವರ ಬದುಕಿನ ನಿರ್ಧಾರಗಳನ್ನು ಅವರೇ ಕೈಗೊಳ್ಳುವುದು ಹೆತ್ತವರಿಗೇಕೆ ಸಂಕಟ ತಂದಿಡುತ್ತದೆ? ತಂದೆ, ತಾಯಿ, ಮಗ, ಮಗಳು ಇವರನ್ನು ಏಕತಂತಿಯಲ್ಲಿ ಬೆಸೆಯುವ ಬಂಧ ಯಾವುದು? ತಲೆಮಾರುಗಳ ಮುಂದಿರುವ ಈ ತಲ್ಲಣಗಳ ರೋಚಕ ಕಥಾನಕ.

**ಮುಂದಿನ ವಾರ ಆರಂಭ**